“ನನಗೆ ಸಾಕಾಗಿದೆ. ನೀನು ಎಲ್ಲಾದರೂ ಇದ್ದುಕೋ, ಏನಾದರೂ ಬರೆದುಕೋ. ನಿನ್ನ ಸಹವಾಸ ಸಾಕು.”

“ನನಗೂ ಬೇಡ ನಿನ್ನ ಬಳಿಯ ಗುಲಾಮಗಿರಿ. ನಾನೇ ಹೋಗುತ್ತೇನೆ.”

“ನಿನ್ನ ಬಟ್ಟೆ, ಬರೆ ಮತ್ತು ಮಿಕ್ಕ ಸಾಮಾನುಗಳನ್ನು ಸೂಟ್‌ಕೇಸುಗಳಲ್ಲಿ ಪ್ಯಾಕ್ ಮಾಡಿಸಿದ್ದೇನೆ. ತೆಗೆದುಕೊಂಡು ಹೊರಡಬಹುದು. ನಾಳೆ ನಮ್ಮ ಲಾಯರ್ ಜೊತೆ ಮಾತನಾಡಿ ಸೆಪರೇಷನ್ನಿಗೆ ಸಿದ್ಧಳಾಗುತ್ತೇನೆ.”

ಇವೆಲ್ಲವನ್ನೂ ನಿರೀಕ್ಷಿಸಿದ್ದ ಡೇವಿಡ್, ಕೂಡಲೇ ಒಂದು ಟ್ಯಾಕ್ಸಿಯನ್ನು ಕರೆದು ತನ್ನ ಸೂಟ್‌ಕೇಸುಗಳೊಡನೆ ಹೊರಟ.

ಡೇವಿಡ್ ನೇರವಾಗಿ ಲೀಸಾಳ ಮನೆಗೆ ಬಂದ. ಬಾಗಿಲು ತೆರೆದ ಲೀಸಾ ಸೂಟ್‌ಕೇಸುಗಳನ್ನು ನೋಡಿ ಚಕಿತಳಾದಳು. ಅವಳ ಮನೆಯಲ್ಲಿಯೇ ರಾತ್ರಿಯೂಟ ಮಾಡಿ ತನ್ನ ಕಥೆಯನ್ನು ಹೇಳಿಕೊಂಡ. ಲೀಸಾ ಮಾತನಾಡಲಿಲ್ಲ. ಆದರೆ ಬೆಳಿಗ್ಗೆ ಎದ್ದಾಗ ನುಡಿದಳು:

“ಡೇವಿಡ್, ನೀವು ಆಗೊಮ್ಮೆ, ಈಗೊಮ್ಮೆ ನನ್ನ ಮನೆಗೆ ಬಂದರೆ ಪರವಾಗಿಲ್ಲ. ಆದರೆ ನನ್ನ ಜೊತೆ ಜೀವನ ನಡೆಸುವ ಹಂಬಲವಿದ್ದರೆ ಮರೆತುಬಿಡಿ. ಅದು ಸಾಧ್ಯವಾಗದ ಕೆಲಸ.”

ಇದನ್ನು ಡೇವಿಡ್ ನಿರೀಕ್ಷಿಸಿರಲಿಲ್ಲ. ಎರಡು ದಿವಸ ಸೂಟ್‌ಕೇಸುಗಳು ಅವಳ ಮನೆಯಲ್ಲಿ ಇರಲಿ ಎಂದು ಹೇಳಿ, ಬಸ್ ಹತ್ತಿ ಆ ಕೆಫೆಗೆ ಬಂದ. ಈಗ ಕೆಲಸ ಹುಡುಕಿಕೊಳ್ಳದೇ ವಿಧಿ ಇಲ್ಲ. ಕಾಲೇಜಿನ ತನ್ನ ವಿಭಾಗಕ್ಕೆ ಅರ್ಜಿ ತಯಾರಿಸಿದ. ತನ್ನ ಸೀವಿಯನ್ನು ತೆರೆದು ಅದರಲ್ಲಿ ಬದಲಾವಣೆಗಳನ್ನು ಮಾಡತೊಡಗಿದ. ಹಾಗೆಯೇ ಅಲ್ಲಿ ಬಾಡಿಗೆಗೆ ಮನೆಗಳು ಎಲ್ಲೆಲ್ಲಿ ದೊರೆಯುತ್ತವೆ ಎಂದು ಇಂಟರ್‌ನೆಟ್ಟಿನಲ್ಲಿ ಹುಡುಕಲಾರಂಭಿಸಿದ.


## ಸಿಡ್ನಿ ಶ್ರೀನಿವಾಸ್

ಮೂಲತಃ ಬೆಂಗಳೂರಿನವರಾದ ಸಿಡ್ನಿ ಶ್ರೀನಿವಾಸ್ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ ಹಾಗೂ ಪಿಎಚ್.ಡಿ ಪದವಿ ಪಡೆದಿದ್ದಾರೆ. ಆಸ್ಟ್ರೇಲಿಯಾದ ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರು.

ಆಸ್ಟ್ರೇಲಿಯಾ ಮಾತ್ರವಲ್ಲದೇ ಜರ್ಮನಿ, ಜಪಾನ್, ಅಮೆರಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನೂ ಮಾಡಿದ್ದಾರೆ. 'ಫ್ಲೂಯಿಡ್ ಮೆಕ್ಯಾನಿಕ್', 'ಆಪ್ಟಿಮೈಜೇಶನ್' ವಿಷಯಗಳಲ್ಲಿ ಪರಿಣತರು. ಅವರ ಸುಮಾರು 100 ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. 'ಶ್ರೀನಿವಾಸ ರಾಮಾನುಜನ್', 'ಗೆಲಿಲಿಯೊ', 'ನ್ಯೂಟನ್', 'ಅಲ್ಬರ್ಟ್ ಐನ್‌ಸ್ಟೈನ್' ಈ ನಾಲ್ಕು ವಿಜ್ಞಾನಿಗಳ ಕುರಿತ ಪುಸ್ತಕಗಳು ಕನ್ನಡ, ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.